ರಾಜ್ಯದಲ್ಲಿ ವಿದ್ಯುದ್ದೀಕರಣಗೊಳಿಸಿದ ಪಂಪುಸೆಟ್ಟುಗಳ ಸಂಖ್ಯೆಯ ಬಗ್ಗೆ

2684 - ಶ್ರೀ ಕೆ. ಲಕ್ಕಪ್ಪ (ಕುಣಿಗಲ್) : ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿ ವಿದ್ಯುದ್ದೀಕರಣಗೊಳಿಸಿದ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು?

ಆ) 1991-92ನೇ ಸಾಲಿನಲ್ಲಿ ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲು ನಿಗಧಿಪಡಿಸಿರುವ ಗುರಿ ಎಷ್ಟು?

ಇ) ಏಪ್ರಿಲ್ 1991ರಿಂದ ಜೂನ್ 1991ರ ಅಂತ್ಯದವರೆಗೆ ವಿದ್ಯುದ್ದೀಕರಣಗೊಳಿಸಿದ ಪಂಪುಸೆಟ್ಟುಗಳ ಸಂಖ್ಯೆ ಎಷ್ಟು?

ಈ) ತುಮಕೂರು ಜಿಲ್ಲೆಯಲ್ಲಿ ಈವರೆಗೆ ವಿದ್ಯುದ್ದೀಕರಣಗೊಳಿಸಲಾದ ಪಂಪುಸೆಟ್ಟುಗಳ ಸಂಖ್ಯೆ ಮತ್ತು ಬಾಕಿ ಉಳಿದಿರುವ ಅರ್ಜಿಗಳ ಸಂಖ್ಯೆ ಎಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು) :

ಅ) 1990-91ನೇ ಸಾಲಿನಲ್ಲಿ ರಾಜ್ಯದಲ್ಲಿ 70,138 ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ.

ಆ) 1991-92ನೇ ಸಾಲಿನಲ್ಲಿ 60,000ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲು ಗುರಿ ಹಾಕಿಕೊಳ್ಳಲಾಗಿದೆ.

ಇ) ಏಪ್ರಿಲ್ 1991ರಿಂದ ಜೂನ್ 1991ರ ಅಂತ್ಯದವರೆಗೆ 8,748 ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ.

ಈ) 1991-92ನೇ ಸಾಲಿನಲ್ಲಿ ಏಪ್ರಿಲ್ 1991ರಿಂದ ಆಗಸ್ಟ್ 1991ರ ಅಂತ್ಯದವರೆಗೆ ತುಮಕೂರು ಜಿಲ್ಲೆಯಲ್ಲಿ 3,005 ಪಂಪುಸೆಟ್ಟುಗಳನ್ನು ವಿದ್ಯುದ್ದೀಕರಣಗೊಳಿಸಲಾಗಿದೆ. ಹಾಗೂ ಜುಲೈ 1991ರ ಅಂತ್ಯದವರೆಗೆ 2,478 ಐ.ಪಿ.ಸೆಟ್ಟ್ ಅರ್ಜಿಗಳು ತುಮಕೂರು ಜಿಲ್ಲೆಯಲ್ಲಿ ಬಾಕಿ ಉಳಿದಿರುತ್ತವೆ.

1990-91ನೇ ಸಾಲಿನಲ್ಲಿ ವಿದ್ಯುತ್ ಶೇಕಡಾವಾರು ಪ್ರಸರಣಾ ನಷ್ಟದ ಬಗ್ಗೆ.

2842 - ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ಶೇಕಡಾವಾರು ಪ್ರಸರಣಾ ನಷ್ಟವೆಷ್ಟು?

ಆ) ಮೇಲ್ಕಂಡ ಅವಧಿಯಲ್ಲಿ ಉಂಟಾದ ಪ್ರಸರಣಾ ನಷ್ಟದಿಂದ ಅನುಭವಿಸಿದ ನಷ್ಟವೆಷ್ಟು?

ಇ) ಅಖಿಲ ಭಾರತ ಮಟ್ಟದ ಸರಾಸರಿ ಪ್ರಸರಣಾ ನಷ್ಟವೆಷ್ಟು?

ಈ) ಪ್ರಸರಣಾ ನಷ್ಟವನ್ನು ಕಡಿಮೆ ಮಾಡಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) 1990-91ನೇ ಸಾಲಿನಲ್ಲಿ ವಿದ್ಯುಚ್ಛಕ್ತಿ ವಿತರಣೆ ಮತ್ತು ಪ್ರಸರಣೆಯಲ್ಲಿ ಉಂಟಾದ ನಷ್ಟ ಶೇಕಡ 19.6 (ತಾತ್ಕಾಲಿಕ)

ಆ) 1990-91ನೇ ಸಾಲಿನ ವಿದ್ಯುಚ್ಛಕ್ತಿ ಪ್ರಸರಣಾ ಮತ್ತು ವಿತರಣಾ ನಷ್ಟದಿಂದ 2,968 ದಶಲಕ್ಷ ಯೂನಿಟ್ಟುಗಳ (ತಾತ್ಕಾಲಿಕ) ವಿದ್ಯುತ್ ನಷ್ಟವುಂಟಾಗಿದೆ.